1.	ಚಿಕ್ಕ ನೀರಾವರಿ ಕೆರೆ ಯಂಕಂಚಿ ತಾ. ಅಥಣಿ	ರೂ. 1.04 ಲಕ್ಷ
2.	ಚಿ.ನೀ. ಕೆರೆ ಬೈಲವಾಡ ತಾ.ಬೈಲಹೊಂಗಲ	ರೂ. 0.50 ಲಕ್ಷ
3.	ಚಿ.ನೀ. ಕೆರೆ ದೇಶನೂರ ತಾ. ಬೈಲಹೊಂಗಲ	ರೂ. 0.84 ಲಕ್ಷ
4.	ಚಿ.ನೀ. ಕೆರೆ ಹಣಮಾಪೂರ ತಾ. ಗೋಕಾಕ್	ರೂ. 0.39 ಲಕ್ಷ
	ಒಟ್ಟು	**ರೂ. 2.77 ಲಕ್ಷ**

ಈ) ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಿದ್ದ ಸಮುದ್ರ ದೊಡ್ಡವಾಡ ಮತ್ತು ನನಗುಂದಕೊಪ್ಪ ಕೆರೆಗಳು ಈ ಹೂಳೆತ್ತುವ ಈ ವರ್ಷದ ಆಯವ್ಯಯದಲ್ಲಿ ಇರುವುದಿಲ್ಲ. ಹೀರೇಕೊಪ್ಪ ಕೆರೆಯು 2000-01ನೇ ಸಾಲಿನ ಆಯವ್ಯಯದಲ್ಲಿ ರೂ. 8.00 ಲಕ್ಷಗಳಿಗೆ ಅಂದಾಜು ಮಂಜೂರಾತಿ ಪಡೆಯಲಾಗಿದೆ. ಕೆರೆ ಹೂಳೆತ್ತುವ ಕಾರ್ಯಕ್ರಮವನ್ನು ಪೂರ್ತಿ ನೀರು ಹೋದ ಮೇಲೆ ಜನವರಿ 2001ರಿಂದ ಪ್ರಾರಂಭಿಸಲಾಗುವುದು. ಸೌಂದತ್ತಿ ತಾಲ್ಲೂಕಿನ ಮರಕುಂಬಿ, ಹಿರೇಬುದ್ನೂರು ಕೆರೆಗಳ ಹೊಳೆತ್ತುವ ಕಾಮಗಾರಿಗಳು ಆಯವ್ಯಯದಲ್ಲಿ ಸೇರಿರುವುದಿಲ್ಲ.

ಹೆಲಿಕ್ಯಾಪ್ಟರುಗಳ ಖರೀದಿ

4484 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವತಿಯಿಂದ ಇದುವರೆವಿಗೆ ಎಷ್ಟು ಹೆಲಿಕಾಪ್ಟರುಗಳನ್ನು ಖರೀದಿಸಲಾಗಿದೆ?

ಆ) ಇದಕ್ಕೆ ತಗುಲಿದ ವೆಚ್ಚವೆಷ್ಟು?

ಇ) ತಾಂತ್ರಿಕ ಹಾಗೂ ಆಡಳಿತಕ್ಕಾಗಿ ಇದುವರೆವಿಗೆ ಆದ ವೆಚ್ಚವೆಷ್ಟು?

ಈ) ಇದರ ಬದಲು ಖಾಸಗಿಯವರಿಂದ ಬಾಡಿಗೆ ಪಡೆದರೆ ಸರ್ಕಾರಕ್ಕೆ ಅಪಾರ ಆರ್ಥಿಕ ಹೊರೆ ತಪ್ಪಿಸಬಹುದಲ್ಲವೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಎರಡು ಹೆಲಿಕ್ಯಾಪ್ಟರುಗಳು.

ಆ) ರೂ. 25,52,31,260.00

ಇ) ಇದುವರೆವಿಗೂ ತಾಂತ್ರಿಕ ಹಾಗೂ ಆಡಳಿತಕ್ಕಾಗಿ ಆದ ವೆಚ್ಚ ಕೆಳಕಂಡಂತ್ತಿದೆ.

ತಾಂತ್ರಿಕ ವೆಚ್ಚ	ರೂ. 11,91,94,456.00
ಆಡಳಿತ ವೆಚ್ಚ	ರೂ. 47,15,948.00

ಈ) ಗಣ್ಯ ವ್ಯಕ್ತಿಗಳ ಸುರಕ್ಷತಾ ದೃಷ್ಟಿಯಿಂದ ಈ ಸಲಹೆ ಸಾಧುವಲ್ಲ.